## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 19 ಇಎಸ್‌ಟಿ 10 2014/12285

ನಿರ್ದೇಶಕರವರ ಕಚೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:01-10-2014

### : ಜ್ಞಾಪನ :

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ (1996 ರ ಎಐಸಿಟಿಇ ವೇತನ ಶ್ರೇಣಿಯಂತೆ ಪದನಾಮ) ಹೆಚ್ಚುವರಿಯಾಗಿ ಪಾವತಿಸಿರುವ ವೇತನದ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ ಇಡಿ 192 ಡಿಟಿಇ 2013, ದಿ:28.12.2013
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪು ದಿ:16.09.2014

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ (ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ ಹೊರತುಪಡಿಸಿ) ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರಿಗೆ, ಎಐಸಿಟಿಇ 06ನೇ ಪರಿಷ್ಕೃತ ವೇತನ ಶ್ರೇಣಿ ರೂ.37400-67000+ ಎಜಿಪಿ 9000 ರಲ್ಲಿ ನಿಗದಿಪಡಿಸಿ ಸಂಬಳವನ್ನು ಮತ್ತು ಬಾಕಿ ವೇತನವನ್ನು ಅನುಮತಿ ಪಡೆಯದೇ ಡ್ರಾ ಮಾಡಲಾಗಿರುತ್ತದೆ. ಸರ್ಕಾರದ ಆದೇಶದ ಪ್ರಕಾರ ವಿದ್ಯಾರ್ಹತೆ ಮತ್ತು ಸೇವಾನುಭವ ಹೊಂದಿಲ್ಲದಿದ್ದಾಗ್ಯೂ 06ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ವಯ ವೇತನ ನಿಗದಿಪಡಿಸಲಾಗಿದೆಯೆಂದು ಮಹಾಲೇಖಾಪಾಲರ ಕಛೇರಿಯ ಹಿರಿಯ ಲೆಕ್ಕ ಸಂಶೋಧನಾಧಿಕಾರಿಗಳು ಟೆಸ್ಟ್ ಆಡಿಟ್ ನಡೆಸಿ ನೀಡಿದ ಆಧರಿಸಿ, ಅವರುಗಳಿಗೆ ಪಾವತಿಸಲಾಗಿರುವ ಹೆಚ್ಚುವರಿ ಸಂಬಳದ ಮೊತ್ತವನ್ನು ಹಿಂಪಡೆಯಲು ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿದೆ.

ಸದರಿ ಆದೇಶವನ್ನು ಸಹಾಯಕ ಪ್ರಾಧ್ಯಾಪಕರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂ: 151 ರಿಂದ 206/2014 ಮತ್ತು ಇತರೆ ಪ್ರಕರಣಗಳಲ್ಲಿ ಪ್ರಶ್ನಿಸಿದ್ದು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸದರಿ ಅರ್ಜಿಗಳನ್ನು ವಜಾಗೊಳಿಸಿ ದಿ: 16-9-2014ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

21. Considering all aspects, we are of the view that the applicants have received undue benefits due to wrong implementation of the Government order dated 07.3.2011 by college managements, all the points and rationale put forth by the applicants to justify their stand are devoid of merits and there is no infirmity in the impugned directions dated 28.12.2013 and 30.12.2013 to recover the unjust gains by the applicants. The applicants are senior officers of the Education Department and the issues & instructions in the case are not complicated. It is apparent that the applicants have taken recourse to the legal proceedings to abuse the process of law to delay recovery of unjustly received amounts.

22. In view of the above, all the applications are dismissed with costs.

23. Before parting with the matter, we would like to make a observation that the responsibility for unauthorized excess drawal, not in tune with the provisions of the GO is normally that of concerned drawing officer and the controlling officer. However, in this case. all the applicants are senior Group-A officers and their pay and allowances can be drawn by the concerned drawing officer based on the authorization issued by the Accountant General (A&E), Karnataka only. The Accountant General is expected to check and ensure that authorizations are issued as per GO concerned.

In this case, unauthorized drawal is seen to have taken place across the State. Moreover, in spite of express instruction in the GO dated 07.3.2011 regarding payment of arrears only after separate orders. arrears also appear to have been drawn in many places without any further sanction or seeking any budgetary support. The way unauthorized drawals have been taken place across the State indicate possibility of nexus or negligence at some levels. We direct that the Registrar shall send a copy of this order to Chief Secretary to Government of Karnataka for information and such action as deemed appropriate."

ಮಾನ್ಯ ಆಡಳಿತ ನ್ಯಾಯಮಂಡಳಿಯ ಆದೇಶದಂತೆ ಹೆಚ್ಚುವರಿಯಾಗಿ ಪಾವತಿ ಮಾಡಿರುವ ಹಣವನ್ನು ವಸೂಲು ಮಾಡುವ ಸಂಬಂಧ ರಾಜ್ಯದಲ್ಲಿನ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ತನಿಖೆ ನಡೆಸಲು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿನ ಈ ಕೆಳಕಂಡ ಅಧಿಕಾರಿಗಳ ತನಿಖಾ ತಂಡವನ್ನು ರಚಿಸಲಾಗಿದೆ. ಸದರಿ ತನಿಖಾ ತಂಡವು ಸಂಸ್ಥೆಗಳಿಗೆ ಭೇಟಿ ನೀಡಿ ಸಹಾಯಕ ಪ್ರಾಧ್ಯಾಪಕರಿಗೆ, ಹೆಚ್ಚುವರಿಯಾಗಿ ಡ್ರಾ ಮಾಡಿರುವ ಹಣದ ಪೂರ್ಣ ಮಾಹಿತಿ, ಮಂಜೂರಾತಿ ನೀಡಲು ಅನುಸರಿಸಿರುವ ಕ್ರಮ, ಲೋಪದೋಷಗಳು, ಆಯವ್ಯಯ ಒದಗಿಸಿರುವ ರೀತಿ, ಖಜಾನೆಯಿಂದ ಹಣ ಡ್ರಾ ಮಾಡಲು ಅನುಸರಿಸಿರುವ ಕ್ರಮ, ಕಾರಣರಾದ ಅಧಿಕಾರಿ/ ಸಿಬ್ಬಂದಿ/ ಸಂಬಂಧಪಟ್ಟವರ ವಿವರಣೆ ಮುಂತಾದ ಅಂಶಗಳನ್ನು ಕೂಲಂಕಷವಾಗಿ ನಿಯಮಗಳನುಸಾರ ಪರಿಶೀಲಿಸಿ ಸಮಗ್ರ ವರದಿ ನೀಡುವಂತೆ ಸೂಚಿಸಲಾಗಿದೆ.

| ಕ್ರ.ಸಂ. | ಅಧಿಕಾರಿ/ ಸಿಬ್ಬಂದಿಯವರ ಹೆಸರು ಮತ್ತು ಪದನಾಮ |
|---|---|
| 1 | ಶ್ರೀ ಜಿ. ನಿರಂಜನದಾಸ್ ರಾಜ್ಪಾನ್, ಜಂಟಿ ನಿರ್ದೇಶಕರು (ಆಡಳಿತ) |
| 2 | ಶ್ರೀ ಚಂದ್ರಶೇಖರ್ ಎಸ್. ಜಂಟಿ ನಿರ್ದೇಶಕರು (ತನಿಖೆ) (ಪ್ರ) |
| 3 | ಶ್ರೀ ರಾಜು, ಲೆಕ್ಕಾಧಿಕಾರಿಗಳು(ಪ್ರಭಾರೆ) |
| 4 | ಶ್ರೀ ರಾಮಚಂದ್ರ ಜೋಯಿಸ್, ಕಛೇರಿ ಅಧೀಕ್ಷಕರು |

ನಿರ್ದೇಶಕರು

ಇವರಿಗೆ,
ಮೇಲ್ಕಂಡ ಅಧಿಕಾರಿ/ ಸಿಬ್ಬಂದಿಯವರಿಗೆ

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ
3. ನಿರ್ದೇಶಕರ ಆಪ್ತಶಾಖೆಗೆ
4. ಇ-ಆಡಳಿತ ವಿಭಾಗಕ್ಕೆ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.